

# ಇದು ಮುತ್ತಿನ ಕಥೆ..!

ಮುತ್ತಿನಿಂದ ತಯಾರಿಸಿದ ಹಾರ, ಕಿವಿಯೋಲೆ, ಉಂಗುರ, ಪೆಂಡೆಂಟ್, ನೆಕ್ಲೇಸ್.. ಎಲ್ಲವೂ ಎಲ್ಲ ಕಾಲಕ್ಕೂ ಸೂಕ್ತವಾದ ಒಡವೆ. ಇದು ಎಂದಿಗೂ ಔಟ್‌ಡೇಟೆಡ್ ಆಗುವುದಿಲ್ಲ. ತ್ರೇತಾಯುಗ, ದ್ವಾಪರ ಯುಗದಿಂದಲೇ ಈ ಮುತ್ತಿನ ಆಭರಣಗಳಿಗೆ ಪ್ರಾಮುಖ್ಯತೆ ಇತ್ತು. ಇಂದಿಗೂ ಅದೇ ಟ್ರೆಂಡ್ ಮುಂದುವರಿದಿದೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ
■ ಚಿತ್ರಗಳು: ಮುಳಿಯ ಕೇಶವ ಭಟ್ & ಸನ್ಸ್

'ಮುತ್ತು...' ಎಂತಹ ಸುಂದರ ಪದ. ಪುಟ್ಟ ಪಾಪುವನ್ನು ಪ್ರೀತಿಸುವುದು, ಸಿಹಿ ಮುತ್ತನ್ನು ನೀಡುವುದರ ಮೂಲಕ, ಶೃಂಗಾರ ಕಲೆಯಲ್ಲೂ ಮುತ್ತು ಅದ್ಭುತ ಸ್ಥಾನವನ್ನು ತನ್ನದಾಗಿಸಿದೆ. ಬಾಂಧವ್ಯ, ಸ್ನೇಹ, ಪ್ರೀತಿಯ ಸಂಕೇತವಾಗಿ 'ಮುತ್ತು'ವಿಗಿರುವ ವಿವಿಧ ಅರ್ಥಗಳನ್ನು ಅಂದರೆ ಆಭರಣ ಮತ್ತು ಸಿಹಿ ಮುತ್ತು ಯಾವುದೇ ಆಗಿರಬಹುದು ನೀಡುವುದು ಪ್ರಾಚೀನದಿಂದಲೇ ಇದೆ.

ಮುತ್ತಿನ ಹಾರ ಯಾಕೆ ಇದು ಇಷ್ಟೊಂದು ಪ್ರಾಮುಖ್ಯತೆ ಪಡೆಯಿತು? ಅದರ ಆಕಾರ, ಅದರ ಸುಂದರತೆ, ಆಕರ್ಷಣೆ, ಹೊಳಪು ಬಣ್ಣ, ವಿನ್ಯಾಸದಿಂದ ಎಂದು ಹೇಳಬಹುದು. ಏಕೆಂದರೆ ಅದು ನಮ್ಮ ಕಣ್ಣ ನೋಟವನ್ನು ಸೆಳೆಯುತ್ತದೆ. ಯಾವುದೇ ಮಹಿಳೆ ಮುತ್ತಿನ ಸರ ಧರಿಸಿದಾಗ ತನ್ನನ್ನೇ ತಾನು ಸಂಭ್ರಮಿಸಿಕೊಳ್ಳುತ್ತಾಳೆ. ಶೃಂಗಾರ ಪ್ರಿಯರ ಅತೀ ಒಲವಿನ ಹಾರ ಎಂದರೆ ಮುತ್ತಿನ ಹಾರ.

ಮುತ್ತನ್ನು ಹಲವಾರು ಆಭರಣಗಳಲ್ಲಿ ಬಳಸುತ್ತೇವೆ. ಮುಖ್ಯವಾಗಿ ಗಿಳಿಯೋಲೆ, ಎರಡೆಳೆ ಸರ, ನೆಕ್ಲೇಸ್, ಆ್ಯಂಟಿಕ್ ಆಭರಣಗಳಲ್ಲಿ, ಜುಮ್ಕಾ, ಉಂಗುರ ಯಾವ ಆಭರಣ ಆಗಲಿ ಮುತ್ತನ್ನು ಅಳವಡಿಸಿದರೆ ಅದರ ಅಂದವೇ ಬೇರೆ. ಆದಷ್ಟು ಹ್ಯಾಂಗಿಂಗ್‌ಗಳಲ್ಲಿ ಮುತ್ತು ಬಳಸಿದಾಗ ಶೃಂಗಾರಮಯವಾಗಿ ಕಾಣುತ್ತದೆ.

ಮುತ್ತಿನಲ್ಲೂ ಹಲವಾರು ಶೇಪ್‌ಗಳಿವೆ. ಓವಲ್ ಶೇಪ್, ಡ್ರಾಪ್ ಶೇಪ್, ರೌಂಡ್ ಶೇಪ್, ಚಪ್ಪಟೆ ಆಕಾರದ್ದು.. ಹೀಗೆ ವಿಭಿನ್ನವಾದ ಶೇಪನ್ನು ಹೊಂದಿರುವ ಮುತ್ತನ್ನು ಆಭರಣಗಳಲ್ಲಿ ಬಳಸುತ್ತೇವೆ.

**ಓವಲ್ ಶೇಪ್**

ಇದು ಕಿವಿಯೋಲೆ ಮಧ್ಯಭಾಗಕ್ಕೆ ಅಥವಾ ಒಂದೇ ಮುತ್ತನ್ನು ಬಳಸಿದ ಕಿವಿಯೋಲೆಯಾಗಿ, ಪದಕದ ಮಧ್ಯಭಾಗಕ್ಕೆ ಒಂದು ಚಿನ್ನದ ಅಥವಾ ಬೆಳ್ಳಿಯ ಕಡ್ಡಿಗೆ ಪೋಣಿಸಿದಂತಿರುವ ಆಭರಣಕ್ಕೆ ಇದು ಹೊಂದುತ್ತದೆ. ಇದು ಮಾಡರ್ನ್ ಬಟ್ಟೆಗಳಿಗೆ ಹೆಚ್ಚು ಸೂಕ್ತ, ಚಿನ್ನದ ಕ್ಯಾಪ್ ಹಾಕಲು ಉತ್ತಮ. ಓವಲ್ ಶೇಪ್ ಇರುವುದರಿಂದ ಮುತ್ತಿನ ಮೇಲೆ ಕೆಳಗೆ ಕ್ಯಾಪ್ ಬಂದರೂ ಮುತ್ತಿನ ಮಧ್ಯಭಾಗ ಚಿನ್ನದಿಂದ ಮುಚ್ಚಿರುವುದಿಲ್ಲ, ಎದ್ದು ಕಾಣುತ್ತಿರುತ್ತದೆ.

**ಡ್ರಾಪ್ ಶೇಪ್**

ಇದನ್ನು ಹ್ಯಾಂಗಿಂಗ್ ಆಗಿ ಬಳಸಬೇಕು. ನೆಕ್ಲೇಸ್, ಕಿವಿಯೋಲೆ, ಪೆಂಡೆಂಟ್ ಗಳ ಕೆಳಭಾಗಕ್ಕೆ ಹೀಗೆ. ಇಂದು ಯಾವುದೇ ಆಭರಣವಾಗಿರಲಿ ಒಂದು ಡ್ರಾಪ್ ಶೇಪ್‌ನ